


## ರೇಖಾ ಪಾತ್ರದಲ್ಲಿ ಅಮಿತಾಭ್ ನೆರಳು!

**ಬಾ**ಲಿವುಡ್‌ನ ಅಪರೂಪದ ಅವಿಸ್ಮರಣೀಯ ಜೋಡಿಗಳ ಪಟ್ಟಿ ತೆರೆದರೆ ಅದರಲ್ಲಿ ನಿಸ್ಸಂಶಯವಾಗಿ ಅಮಿತಾಭ್ ಬಚ್ಚನ್ ಮತ್ತು ರೇಖಾ ಜೋಡಿಯ ಹೆಸರು ಎದ್ದು ಕಾಣುತ್ತದೆ. ಒಂದು ಕಾಲದಲ್ಲಿ ಸಿನಿಮಾ ರಸಿಕರನ್ನು ಮುದಗೊಳಿಸಿದ್ದ ಜೋಡಿಯಿದು. ಈ ಜೋಡಿ ಕೊನೆಯ ಬಾರಿಗೆ ತೆರೆ ಹಂಚಿಕೊಂಡಿದ್ದು 1981ರಲ್ಲಿ. ಯಶ್ ಚೋಪ್ರಾ ನಿರ್ಮಾಣದ 'ಸಿಲ್‌ಸಿಲಾ' ಚಿತ್ರದ ಬಳಿಕ ಮತ್ತೆ ಇಬ್ಬರೂ ಒಟ್ಟಿಗೆ ನಟಿಸಲಿಲ್ಲ. 1986ರಲ್ಲಿ 'ಆಖ್ರಿ ರಾಸ್ತಾ'ದಲ್ಲಿ ಶ್ರೀದೇವಿಗೆ ಹಾಗೂ 'ಸೂರ್ಯವಂಶಂ'ನಲ್ಲಿ ಸೌಂದರ್ಯ ಹಾಗೂ ಜಯಸುಧಾರಿಗೆ ರೇಖಾ ಅವರೇ ದನಿ ನೀಡಿದ್ದರು. ಬಹಿರಂಗವಾಗಿ ಒಪ್ಪಿಕೊಳ್ಳದ ಆದರೆ ಗುಟ್ಟಾಗಿ ಉಳಿಯದ ಇಬ್ಬರ ಪ್ರೇಮ ಹತ್ತಾರು ಕಥೆಗಳನ್ನು ಹುಟ್ಟುಹಾಕಿತ್ತು. ಮುಂದೆ ವೈಯಕ್ತಿಕ ಬದುಕಿನ ಗೊಂದಲ, ದ್ವೇಷಗಳೂ ಇಬ್ಬರನ್ನು ದೂರ ಮಾಡಿದ್ದವು. ಈ ಜೋಡಿ ಪರದೆ ಮೇಲೆ ಒಟ್ಟಿಗೆ ಕಾಣಿಸಿಕೊಳ್ಳುವ ಸುದ್ದಿ ಆಗಾಗ ಹರಿದಾಡಿದರೂ ಅದು ಸತ್ಯವಾಗಲಿಲ್ಲ. ಈಗ ರೇಖಾ ಅಭಿನಯದ ಚಿತ್ರವೊಂದರಲ್ಲಿ ಅಮಿತಾಭ್ 'ಕಾಣಿಸಿ'ಕೊಂಡಿದ್ದಾರೆ. ಅದೂ ರೇಖಾ ಅವರ ಮೂಲಕ!

ಇಂದ್ರ ಕುಮಾರ್ ನಿರ್ದೇಶನದ 'ಸೂಪರ್ ನಾನಿ' ಚಿತ್ರದಲ್ಲಿ ರೇಖಾ, ಅಮಿತಾಭ್‌ರ ಮ್ಯಾನರಿಸಂ ಅನ್ನು ಅನುಕರಣೆ ಮಾಡಿದ್ದಾರಂತೆ. ನಾಲ್ಕು ವರ್ಷದ ನಂತರ ಬಣ್ಣ ಹಚ್ಚಿರುವ ರೇಖಾ, ಚಿತ್ರದ ನಾಯಕ ಶರ್ಮನ್ ಜೋಶಿಯ ಅಜ್ಜಿಯ ಪಾತ್ರದಲ್ಲಿ ನಟಿಸಿದ್ದಾರೆ. ಹಳೆಯ ಕಾಲದ ಅಜ್ಜಿಯನ್ನು ನಾಯಕ ಹೊಸ ಫ್ಯಾಷನ್ ಅಜ್ಜಿಯನ್ನಾಗಿ ಪರಿವರ್ತಿಸುತ್ತಾನೆ. ಹೊಸ ವೇಷ ತೊಟ್ಟ ಅಜ್ಜಿ ಮಾಡಲಿಂಗ್ ಲೋಕವನ್ನು ಪ್ರವೇಶಿಸುತ್ತಾಳೆ. ಜಾಹೀರಾತಿನ ಚಿತ್ರೀಕರಣದಲ್ಲಿ ಅಮಿತಾಭ್‌ನನ್ನು ಅನುಕರಿಸುವ ಆಹ್ವಾನ ಎದುರಾಗುತ್ತದೆ. ಆ ಸನ್ನಿವೇಶಕ್ಕೆ ರೇಖಾ ಅವರು ಅಮಿತಾಭ್‌ರ ಮ್ಯಾನರಿಸಂ ಅನ್ನು ಅನುಕರಣೆ ಮಾಡಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ಟ್ರೇಲರ್‌ನಲ್ಲಿ ರೇಖಾ, ಥೇಟ್ ಅಮಿತಾಭ್ ಶೈಲಿಯಲ್ಲಿ ಡೈಲಾಗ್ ಉಸುರುವುದನ್ನು ಕಂಡು ಎಲ್ಲರೂ ಬೆರಗಾಗಿದ್ದಾರೆ.

'ಹೌದು. ರೇಖಾಜಿ, ಅಮಿತಾಭ್ ಅವರನ್ನು ಅನುಕರಿಸಿದ್ದಾರೆ' ಎಂದು ಒಪ್ಪಿಕೊಂಡಿದ್ದಾರೆ ನಿರ್ದೇಶಕ ಇಂದ್ರ ಕುಮಾರ್. 'ಚಿತ್ರದ ಕಥೆಯೇ ಹಾಗಿದೆ. ರೇಖಾ ಅವರ ಪಾತ್ರ ಬದಲಾಗುತ್ತದೆ. ಆಗ ಅವರು ಈ ರೀತಿ ಅಮಿತಾಭ್‌ರನ್ನು ಅನುಕರಣೆ ಮಾಡುವ, ಅವರಂತೆ ದಿರಿಸು ತೊಟ್ಟು ಸಂಭಾಷಣೆ ಹೇಳುವ ಪ್ರಸಂಗ ಬರುತ್ತದೆ. ಈ ಸನ್ನಿವೇಶದ ಕುರಿತು ಅವರಿಗೆ ಮೊದಲೇ ಹೇಳಿದ್ದೆವು. ಇದು ತಮಾಷೆಯ ದೃಶ್ಯ. ರೇಖಾ ಕ್ರೀಡಾಸ್ಫೂರ್ತಿಯಿಂದಲೇ ಅದನ್ನು ತೆಗೆದುಕೊಂಡಿದ್ದಾರೆ' ಎಂದು ಹೇಳುತ್ತಾರೆ ಅವರು. ಹೊಸ ಜೋಡಿಗಳೆಲ್ಲ ಗದ್ದಲ ಮಾಡುತ್ತಿರುವ ಈ ಹೊತ್ತಿನಲ್ಲಿ ಈ ಹಳೆ ಜೋಡಿಯ ಹೊಸ ಬೆಸುಗೆ ಅಚ್ಚರಿ ಮೂಡಿಸಿದೆ. ಇದಕ್ಕೆ ಅಮಿತಾಭ್ ಹೇಗೆ ಪ್ರತಿಕ್ರಿಯೆ ನೀಡುತ್ತಾರೆ ಎನ್ನುವುದು ಸದ್ಯದ ಕುತೂಹಲ.

## 'ರಜನಿಕಾಂತ್'ಗೆ ಸ್ಟೇ!

**ಖ್ಯಾ**ತನಾಮರು, ಕ್ರೀಡಾಪಟುಗಳ ಜೀವನಗಾಥೆಯನ್ನು ಒಳಗೊಂಡ ಚಿತ್ರಗಳು ಸಾಲು ಸಾಲಾಗಿ ಬಾಲಿವುಡ್ ಅಂಗಳದಿಂದ ಹೊರಬರುತ್ತಿವೆ. ಹಾಗೆಯೇ 'ಮೈ ಹೂ ರಜನಿಕಾಂತ್' ಎಂಬ ಚಿತ್ರವೂ ಸೃಷ್ಟಿಯಾಗಿದೆ. ಆದರೆ ಇದು ರಜನಿಕಾಂತ್ ಅವರ ಜೀವನ ಕಥೆಯನ್ನು ಆಧರಿಸಿದ ಚಿತ್ರವಲ್ಲ. ಚಿತ್ರದ ವಿಡಿಯೊ ತುಣುಕುಗಳನ್ನು ನೋಡಿದವರಿಗೆ ಅದೊಂದು ಹಾಸ್ಯಮಯಯ ಚಿತ್ರ ಎಂದೆನಿಸಿದೆ. ನಿಜ. ಚಿತ್ರತಂಡವೂ ಅದನ್ನು ಘೋಷಿಸಿದೆ. ಚಿತ್ರದ ನಾಯಕ ರಜನಿಕಾಂತ್ ರಾವ್ ಎಂಬ ಹೆಸರಿನ ಮೂರ್ಖ, ಸಿಬಿಐ ಅಧಿಕಾರಿ ಹಾಗೂ ಕಾಂಟ್ರಾಕ್ಟ್ ಕಿಲ್ಲರ್. ಅಲ್ಲದೆ ಚಿತ್ರದ ನಾಯಕಿ ಸೂಪರ್ ಸ್ಟಾರ್ ರಜನಿಕಾಂತ್ ಅವರ ಕಟ್ಟಾಭಿಮಾನಿ.

ತಮ್ಮ ಹೆಸರನ್ನು ಈ ರೀತಿ ಬಳಸಿಕೊಂಡಿರುವುದಕ್ಕೆ ನಟ ರಜನಿಕಾಂತ್ ಸಿಟ್ಟಿಗೆದ್ದಿದ್ದಾರೆ. ಚಿತ್ರ ಬಿಡುಗಡೆಗೆ ಅನುಮತಿ ನೀಡಬಾರದು ಎಂದು ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ರಜನಿಕಾಂತ್ ಅವರ ಮೂಲ ಹೆಸರು ಶಿವಾಜಿರಾವ್ ಗಾಯಕ್‌ವಾಡ್. 'ಎರಡೂ ಹೆಸರುಗಳನ್ನು ಬೆರೆಸಿ ಶಿವಾಜಿರಾವ್ ಎಂಬ ಪಾತ್ರ ಸೃಷ್ಟಿಸಿರುವ ಚಿತ್ರತಂಡ, ತಮ್ಮ ಹೆಸರನ್ನು ಬಳಸಿಕೊಳ್ಳಲು ತಮ್ಮಿಂದ ಅನುಮತಿ ಪಡೆದಿಲ್ಲ. ಅಲ್ಲದೆ, ಅವರು ತಮ್ಮನ್ನು ಸಂಪರ್ಕಿಸಿಯೇ ಇಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ ರಜನಿಕಾಂತ್. ಒಂದು ಮೂಲದ ಪ್ರಕಾರ ಚಿತ್ರದಲ್ಲಿ ರಜನಿಕಾಂತ್ ಅವರ ಸೂಪರ್‌ಸ್ಟಾರ್ ಇಮೇಜ್ ಅನ್ನು ಅಣಕವಾಡುವ ರೀತಿಯಲ್ಲಿ ಪಾತ್ರವನ್ನು ಚಿತ್ರಿಸಲಾಗಿದೆ. ವ್ಯಕ್ತಿಯೊಬ್ಬನ ಅನುಮತಿಯಿಲ್ಲದೆ, ಆತನ ವ್ಯಕ್ತಿತ್ವ, ಹೆಸರನ್ನು ಬಳಸಿಕೊಂಡು ಸಿನಿಮಾ ಮಾಡುವುದು ಸರಿಯಲ್ಲ. ಅಲ್ಲದೆ, ಇಲ್ಲಿ ತಮ್ಮ ಘನತೆಗೆ ಚ್ಯುತಿ ತರುವ ರೀತಿಯಲ್ಲಿ ಚಿತ್ರಿಸಿರುವುದು ನೈತಿಕವಲ್ಲ ಎಂದು ವಾದ ಮಂಡಿಸಿರುವ ರಜನಿಕಾಂತ್, ಸದ್ಯಕ್ಕೆ ಚಿತ್ರ ಬಿಡುಗಡೆಯಾಗದಂತೆ ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ರಜನಿಕಾಂತ್ ತಂದಿರುವ ಮಧ್ಯಾಂತರ ತಡೆಯಾಜ್ಞೆ ಈ ಸಿನಿಮಾಕ್ಕೆ ಮಾತ್ರವಲ್ಲ, ಯಾವುದೇ ಸಿನಿಮಾ, ಜಾಹೀರಾತು, ವ್ಯವಹಾರಗಳಿಗೂ ಅನ್ವಯ. ಅವರ ಹೆಸರು, ವರ್ಚಸ್ಸು, ಚಿತ್ರ, ಸಂಭಾಷಣೆಯ ಶೈಲಿಗಳನ್ನು ಬಳಸಿಕೊಳ್ಳುವಂತಿಲ್ಲ. ತಮ್ಮನ್ನು ಅಣಕಿಸಿರುವ ಚಿತ್ರಕ್ಕೇನೋ ಅವರು ತಡೆಯಾಜ್ಞೆ ತಂದಿದ್ದಾರೆ.

■ ಅಮಿ

